**ಓ ಎಸ್ ನಂಃ 388/2016**
**ಪಿ ಡಬ್ಲ್ಯೂ ಃ 1**

**ದಿಃ 11.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ಎಂ ಆರ್ ವಕೀಲರಿಂದ :-**

ಪ್ರಥಮ ವರ್ತಮಾನ ವರದಿ ಹಾಗೂ ದೂರು ಪ್ರತಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 24 ಮತ್ತು ನಿಪಿ 25 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ :-**

ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. 1 ನೇ ವಾದಿ ನನ್ನ ತಂದೆ. 2 ನೇ ವಾದಿ ನನ್ನ ಚಿಕ್ಕಪ್ಪ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ನವರು ವ್ಯವಸಾಯನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ಚನ್ನಮುನಿ ರವರು ನನ್ನ ತಾತ. ಅವರಿಗೆ 2 ಜನ ಮಕ್ಕಳು. 1) ಚನ್ನರಾಯಪ್ಪ 2) ಹನುಮಯ್ಯ. ಗಾಳಪ್ಪ ಉರುಫ್ ಗಾಳ ಹನುಮಯ್ಯ ರವರು ನನ್ನ ತಂದೆಯ ತಂದೆ. ಗಂಗಮ್ಮ ರವರು ಹನುಮಯ್ಯನವರ ಸಂಬಂಧಿಕರು. ಹನುಮಯ್ಯ ರವರು ನರಸಿಂಹಯ್ಯನವರ ತಂದೆ. ಈ ಮೇಲ್ಕಂಡ ವ್ಯಕ್ತಿಗಳು ಈಗ ಜೀವಂತವಾಗಿರುವುದಿಲ್ಲ. ಈ ದಾವೆಯ ವಾದ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಹೇಳಿ ಬರೆಸಿರುತ್ತಾರೆ. ವಾದ ಪತ್ರವನ್ನು ತಯಾರು ಮಾಡುವ ಕಾಲಕ್ಕೆ ನಾನು, ನನ್ನ ತಂದೆ ಹಾಗೂ ಚಿಕ್ಕಪ್ಪ ಹೋಗಿರುತ್ತೇವೆ. ಈ ಮೇಲ್ಕಂಡ 5 ವ್ಯಕ್ತಿಗಳು ಯಾವ ದಿನ ಹಾಗೂ ಯಾವ ವರ್ಷದಂದು ಮರಣ ಹೊಂದಿದ ಬಗ್ಗೆ ದಾಖಲೆಗಳು ನೀಡಿರುವುದಿಲ್ಲ ಮತ್ತು ಅವರು ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂಬ ವಿಚಾರವನ್ನು ಹೇಳಿ ಬರೆಸಿಲ್ಲ ಎಂದರೆ ಸರಿ. ಈ ಮೇಲ್ಕಂಡ 5 ಜನರಿಗೂ ಮತ್ತು ದಾವ ಷೆಡ್ಯೂಲ್ ಸ್ವತ್ತಿಗೂ ಏನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.